

ಫೋಟೊ ಕ್ಲಿಕ್ಕಿಸಿ ಅದನ್ನು ತಮ್ಮ ಸ್ಟೇಟಸ್‌ನಲ್ಲಿ ಹಾಕಿಬಿಡುತ್ತಾರೆ. ಇವರೇನೋ ಚೆಂದದ ಪೋಸ್ ಕೊಟ್ಟು ನಿಂತು ಕ್ಲಿಕ್ಕಿಸಿಕೊಂಡಿರುತ್ತಾರೆ. ಆದರೆ ಪಾಪ ಇವರ ಅಕ್ಕಪಕ್ಕ ನಿಂತ ತಪ್ಪಿಗೆ ಅಪರಿಚಿತರೂ ಆ ಫೋಟೊದಲ್ಲಿ ಬಂದುಬಿಟ್ಟಿರುತ್ತಾರೆ. ಅದೂ ಯಾವ್ಯಾವುದೋ ಅವತಾರದಲ್ಲಿ!

ಮೊನ್ನೆ ನನ್ನ ಗೆಳತಿಯೊಬ್ಬಳು ತಾನು ಪ್ರವಾಸಕ್ಕೆ ಹೋದ ಫೋಟೊಗಳನ್ನೆಲ್ಲ ನಮ್ಮ ಫ್ರೆಂಡ್ಸ್ ಗ್ರೂಪ್‌ನಲ್ಲಿ ಶೇರ್ ಮಾಡಿದ್ದಳು. ಕಿಕ್ಕಿರಿದು ತುಂಬಿದ್ದ ಆ ಸ್ಥಳದಲ್ಲಿ ಅವಳಿಗೆ ಫೋಟೊ ತೆಗೆದುಕೊಳ್ಳಲು ಏಕಾಂತದ ಸ್ಥಳವೇನೂ ಸಿಕ್ಕಿರಲಿಲ್ಲ. ಹೀಗಾಗಿ ಅವಳು ತೆಗೆದ ಫೋಟೊದಲ್ಲಿ ಯಾರದೋ ಬೆನ್ನು, ಇನ್ಯಾರದೋ ಅರ್ಧ ಮುಖ, ಮತ್ಯಾರೋ ಕೈ ಎತ್ತಿ ತಮ್ಮೆದುರಿನವರ ಜೊತೆ ಮಾತಾಡುತ್ತಿರುವ ಭಂಗಿ, ಪ್ರೇಮಿಗಳಿಬ್ಬರ ಕಿಸ್ಸಿಂಗ್ ಸೀನು ಹೀಗೆ ಎಲ್ಲ ದೃಶ್ಯಗಳು ಸೆನ್ಸಾರ್ ಕಟ್ ಇಲ್ಲದೆ ಸೆರೆಯಾಗಿದ್ದವು.

ಮೊನ್ನೆ ಬೀಚಿಗೆ ಹೋದ ನಮ್ಮ ಪರಿಚಯದವರು ಹಾಕಿದ ಸ್ಟೇಟಸ್ ಕಥೆಯೂ ಹೀಗೆ ಇದ್ದಿತ್ತು. ಸ್ವಿಮ್ಮಿಂಗ್ ಸೂಟ್‌ನಲ್ಲಿದ್ದ ವಿದೇಶಿ ಮಹಿಳೆಯರು, ಸಮುದ್ರ ಸ್ನಾನ ಮಾಡಿ ಬೀಚಿನಲ್ಲಿ ಬಟ್ಟೆ ಬದಲಾಯಿಸುತ್ತಿರುವ ಪುರುಷರು... ಹೀಗೆ ನೋಡಬಹುದಾದದ್ದು, ನೋಡಬಾರದ್ದು ಎಲ್ಲ ಕುಳಿತಲ್ಲೇ ನೋಡುವ ಭಾಗ್ಯ (ದೌರ್ಭಾಗ್ಯ!) ನಮ್ಮದಾಯಿತು!

ಉಚಿತ ಬಸ್ ಶುರುವಾದ ಮೇಲಂತೂ ಪಾಪ ಹೆಂಗಳೆಯರು ಬಸ್ ಹತ್ತಲು, ಸೀಟು ಹಿಡಿಯಲು ಪಟ್ಟ ಪರದಾಟ, ಮಾಡಿಕೊಂಡ ಹೊಡೆದಾಟ, ಬಡಿದಾಟ ಎಲ್ಲವೂ ಕಂಡವರ ಮೊಬೈಲ್‌ನಲ್ಲಿ ಸೆರೆಯಾಗಿ ಒಬ್ಬರಿಂದ ಒಬ್ಬರಿಗೆ ರವಾನೆಯಾದವು. ಈ ಹೊಡೆದಾಟದ ಸಮಯದಲ್ಲಿ ಕೆಲವರು ಕೈ ಮುರ್ಕೊಂಡದ್ದು, ಕೆಲವರು ಬಸ್ಸಿನ ಬಾಗಿಲು ಕಿಟಕಿಗಳನ್ನೇ ಮುರಿದದ್ದು, ಕಂಡಕ್ಟರ್ ಜೊತೆಗೆ ಜಗಳವಾಡಿದ್ದು ಹೀಗೆ ಒಂದೂ ಬಿಡದೆ ಎಲ್ಲ ದೃಶ್ಯಗಳು ಸದ್ದಿಲ್ಲದೆ ಮೊಬೈಲ್‌ನಲ್ಲಿ ಸೆರೆಯಾಗಿ ಸುದ್ದಿಯಾದವು. ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ಬಸ್ಸಿನಲ್ಲಿದ್ದ ಮಹಿಳೆಯೊಬ್ಬರು ತಮ್ಮ ಮಗುವಿನ ಶೌಚಕಾರ್ಯ ಸಂಪೂರ್ಣವಾದ ಮೇಲೆ ಬಸ್ಸಿನ ಕಿಟಕಿಯಿಂದಲೇ ಅದನ್ನು ಸ್ವಚ್ಛಗೊಳಿಸಿದ ಫೋಟೊ ಕೂಡ ಯಾರೋ ಪುಣ್ಯಾತ್ಮರು ಕ್ಲಿಕ್ಕಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಅದು ಇದ್ದ ಬದ್ದ ವಾಟ್ಸ್ಆ್ಯಪ್ ಗ್ರೂಪ್‌ಗಳಲ್ಲಿ ಶೇರ್ ಆಗಿ ಆ ಫೋಟೊ ವೈರಲ್ ಆದ ವಿಷಯ ಈಗ ಅಗಿದು ಉಗುಳಿದ ವೀಳ್ಯದೆಲೆ ತರಹ ಹಳೆಯ ಸುದ್ದಿಯಾಗಿದೆ.

ಮೊದಲೆಲ್ಲ ಆಗಷ್ಟೇ ಹುಟ್ಟಿದ ಹಸುಗೂಸುಗಳ ಫೋಟೊ ತೆಗೆಯಲು ಮನೆಯ ಹಿರಿಯರು ಬಿಡುತ್ತಿರಲಿಲ್ಲ. ಮಗುವಿಗೆ ಕೆಟ್ಟ ದೃಷ್ಟಿ ತಾಗುತ್ತದೆ ಎಂಬ ಮುಂದಾಲೋಚನೆಯಿಂದ ಹೀಗೆ ಮಾಡುತ್ತಿದ್ದರು. ಅದಕ್ಕಾಗಿಯೇ ಕಪ್ಪು ಕಾಡಿಗೆಯ ದೊಡ್ಡ ಬೊಟ್ಟನ್ನು ಮಗುವಿನ ಹಣೆಗೆ, ಗಲ್ಲಕ್ಕೆ ಹಚ್ಚುತ್ತಿದ್ದರು. ಈಗ ಮಗು ಹುಟ್ಟುವುದಕ್ಕೆ ಮುಂಚೆಯೇ ಬೇಬಿ ಫೋಟೊಶೂಟ್ ಶುರುವಾಗಿರುತ್ತದೆ. ಕಂದಮ್ಮ ಹುಟ್ಟಿದ ಕೂಡಲೇ ಅದರ ಫೋಟೊ ಕ್ಲಿಕ್ಕಿಸಿ ‘ಪುತ್ರೋತ್ಸವ’, ‘ನಮ್ಮ ಮನೆಗೆ ಲಕ್ಷ್ಮಿ ಬಂದಳು’ ಎಂದೆಲ್ಲ ವಾಟ್ಸಾಪ್‌ನಲ್ಲಿ, ಸ್ಟೇಟಸ್‌ನಲ್ಲಿ ಹಾಕಿ ಮಗು ಹೇಗಿದೆ, ಗಂಡೋ ಹೆಣ್ಣೋ ಎಂದು ಕುತೂಹಲದಿಂದ ಕಾಯುತ್ತಿರುವವರ ಕಾಯುವಿಕೆಗೆ ಫುಲ್ ಸ್ಟಾಪ್ ಹಾಕಿಬಿಟ್ಟಿರುತ್ತದೆ.

ಈ ಸ್ಮಾರ್ಟ್ ಯುಗದಲ್ಲಿ ರಾಜಕಾರಣಿಗಳು, ಸೆಲೆಬ್ರಿಟಿಗಳು ಭಾಷಣ ಮಾಡುವಾಗಲೊ, ಪತ್ರಿಕೆಗಳಿಗೆ ಸಂದರ್ಶನ ಕೊಡುವಾಗಲೊ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಮೊದಲೆಲ್ಲ ಅವರ ಮಾತುಗಳಿಂದ ಏನಾದರೂ ವಿವಾದಗಳಾದರೆ ‘ನಾನು ಹಾಗೆ ಹೇಳೇ ಇಲ್ಲ. ನನ್ನ ಮಾತುಗಳನ್ನು ತಿರುಚಲಾಗಿದೆ’ ಎಂದು ಹೇಳಿ ಜಾರಿಕೊಳ್ಳಬಹುದಿತ್ತು. ಈಗ ಎಲ್ಲವೂ ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಆಗಿರುವುದರಿಂದ ಸಿಕ್ಕಿಹಾಕಿಕೊಳ್ಳುವ ಅಪಾಯಗಳೇ ಹೆಚ್ಚಾಗಿಬಿಟ್ಟಿವೆ.

ಇದು ಸಾಮಾನ್ಯರ ಪಾಡಾದರೆ, ಸೆಲೆಬ್ರಿಟಿಗಳ ಪಾಡಂತೂ ಕೇಳುವುದೇ ಬೇಡ! ಯಾವ ಸೆಲೆಬ್ರಿಟಿ ಎಲ್ಲಿ, ಯಾರ ಜೊತೆ ಲೇಟ್ ನೈಟ್ ಪಾರ್ಟಿ ಮಾಡಿದರು, ಯಾವ ಹೀರೊಯಿನ್ ಯಾವ ಹೀರೊ ಜೊತೆ ಡೇಟಿಂಗ್ ಮಾಡುತ್ತಿದ್ದಾರೆ, ಅವರಿಬ್ಬರೂ ಯಾವ ಜಿಮ್‌ನಲ್ಲಿ ಒಟ್ಟಿಗೆ ವರ್ಕೌಟ್ ಮಾಡಿದರು, ಎಲ್ಲಿ ಬರ್ತ್‌ಡೇ ಸೆಲೆಬ್ರೇಟ್ ಮಾಡಿಕೊಂಡರು, ಎಲ್ಲಿ ಯಾರ ಜೊತೆ ವೆಕೇಶನ್ ಕಳೆದರು, ಯಾವ ನಾಯಕಿ ಯಾವ ನಾಯಕನ ಜೊತೆ ಬ್ರೇಕಪ್ ಮಾಡಿಕೊಂಡಳು, ಯಾವ ಸ್ಟಾರ್ ನಟನಟಿಯರ ಮದುವೆ ಮುರಿದು ಬೀಳುವುದರಲ್ಲಿದೆ ಹೀಗೆ ಪ್ರತಿ ಸಂಗತಿಯೂ ಫೋಟೊ ಅಥವಾ ವಿಡಿಯೊ ಸಹಿತ ಪತ್ರಿಕೆಗಳಲ್ಲಿ ವರದಿ ಬಂದೇ ಬಿಟ್ಟಿರುತ್ತದೆ. ಒಟ್ಟಿನಲ್ಲಿ ಪ್ರೈವಸಿ ಎಂಬುದು ಈಗ ಕಾಣದಂತೆ ಮಾಯವಾಗಿಬಿಟ್ಟಿದೆ!

ಪ್ರತಿಕ್ರಿಯಿಸಿ: **feedback@sudha.co.in**